# PAPER-II
# KANNADA

**Signature and Name of Invigilator**

1. (Signature) ___________________________
   (Name) ______________________________
2. (Signature) ___________________________
   (Name) ______________________________

OMR Sheet No. : ..............................................
(To be filled by the Candidate)

Roll No. | | | | | | | | |
(In figures as per admission card)

Roll No.__________________________________
(In words)

**D 2 1 1 4**

Time : $1\,^1/_4$ hours] [Maximum Marks : **100**

Number of Pages in this Booklet : **12** | Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the items are to be indicated in the **OMR Sheet given inside the Paper I Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means such as change of response by scratching or using white fluid, you will render yourself liable to disqualification.
9. You have to return the test question booklet and Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   **उदाहरण :** (A) (B) ● (D)
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई नकारात्मक अंक नहीं हैं ।**

## KANNADA
## Paper – II

**Note :** This paper contains **fifty (50)** objective type questions of **two (2)** marks each. **All** questions are compulsory.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

**1.** ಹಲ್ಮಿಡಿ ಶಾಸನವನ್ನು ಮೊದಲು ಗುರುತಿಸಿ ಪ್ರಕಟಿಸಿದವರು :

(A) ಜಿ.ಎಸ್. ಗಾಯಿ (B) ಎಂ.ಎಂ. ಕಲಬುರ್ಗಿ

(C) ಬಿ.ಎಲ್. ರೈಸ್ (D) ಎಂ.ಎಚ್. ಕೃಷ್ಣ

**2.** 'ದೀನಾರ' ಎಂಬ ನಾಣ್ಯದ ಉಲ್ಲೇಖವಿರುವ ಪ್ರಾಚೀನ ಕೃತಿ :

(A) ಕವಿರಾಜಮಾರ್ಗ (B) ವಡ್ಡಾರಾಧನೆ

(C) ಅಜಿತ ಪುರಾಣ (D) ನೇಮಿನಾಥ ಪುರಾಣ

**3.** 'ಮಲ್ಲಿಗೆಗಳ್ ಮಾವಿಂಗೆ ಕೂರ್ತೊಡೆ ಮಾವು ಕೂರ್ತುದು ವಸಂತ ಶ್ರೀಗೆ' ಎಂಬ ವಾಕ್ಯವಿರುವ ಕೃತಿ :

(A) ಅನಂತನಾಥ ಪುರಾಣ (B) ರಾಮಚಂದ್ರಚರಿತ ಪುರಾಣ

(C) ಮಲ್ಲಿನಾಥ ಪುರಾಣ (D) ಆದಿ ಪುರಾಣ

**4.** 'ಅಂತರಂಗದ ಕದವು ತೆರೆಯಿತಿಂದು' ಎಂದು ಹೇಳಿದ ಕವಿ :

(A) ಬಸವಣ್ಣ (B) ಪುರಂದರದಾಸ

(C) ವಿಜಯದಾಸ (D) ಮಹಿಪತಿದಾಸ

**5.** ಇವರು ಮೊದಲ ಶೂನ್ಯ ಸಂಪಾದನಕಾರರು :

(A) ಶಿವಗಣಪ್ರಸಾದಿ ಮಹದೇವಯ್ಯ (B) ಗೂಳೂರು ಸಿದ್ಧವೀರಣ್ಣೊಡೆಯ

(C) ದೇವರ ದಾಸಿಮಯ್ಯ (D) ನಿಜಗುಣ ಶಿವಯೋಗಿ

**6.** ಭೀಮಕವಿಯ 'ಬಸವ ಪುರಾಣ' ದ ಕಾವ್ಯ ರೂಪ :

(A) ವಾರ್ಧಕ ಷಟ್ಪದಿ (B) ಕುಸುಮ ಷಟ್ಪದಿ

(C) ರಗಳೆ (D) ಭಾಮಿನಿ ಷಟ್ಪದಿ

**7.** ರೊಮ್ಯಾಂಟಿಕ್ ಸಾಹಿತ್ಯದ ಪ್ರಾತಿನಿಧಿಕ ಕವಿ :

(A) ಹೋಮರ್ (B) ವರ್ಡ್ಸ್‌ವರ್ತ್

(C) ಇಲಿಯಟ್ (D) ಕಮು

8. ಕನ್ನಡ ಪತ್ರಿಕೋದ್ಯಮದ ಪಿತಾಮಹ :

(A) ಡಿ. ವಿ. ಜಿ.
(B) ಎಂ.ಎನ್. ಕಾಮತ್
(C) ಹರ್ಮನ್ ಮೊಗ್ಲಿಂಗ್
(D) ಕಾಲ್ಡ್‌ವೆಲ್

9. 'ದುರ್ಗೇಶ ನಂದಿನಿ' ಕಾದಂಬರಿಯ ಕರ್ತೃ :

(A) ಬಂಕಿಮಚಂದ್ರ
(B) ವೆಂಕಟಾಚಾರ್ಯ
(C) ಪ್ರೇಮಚಂದ್
(D) ರವೀಂದ್ರನಾಥ ಠಾಗೂರ್

10. 'ಯಾನ' ಕಾದಂಬರಿಯ ಕರ್ತೃ :

(A) ಕೃಷ್ಣಮೂರ್ತಿ ಪುರಾಣಿಕ
(B) ತ.ರಾ. ಸುಬ್ಬರಾವ್
(C) ಬಸವರಾಜ ಕಟ್ಟೀಮನಿ
(D) ಎಸ್. ಎಲ್. ಭೈರಪ್ಪ

11. ಇದು ಲಲಿತ ಪ್ರಬಂಧ ಪ್ರಕಾರಕ್ಕೆ ಸೇರಿದ ಕೃತಿ :

(A) ಹರಿಜನ್ವಾರ
(B) ಅಲೆಯುವ ಮನ
(C) ಹುಳಿ ಮಾವಿನ ಮರ
(D) ಸುರಗಿ

12. 'ಗೊಂದಲ ಪುರ' ಕವಿತೆಯನ್ನು ಬರೆದವರು :

(A) ರಾಮಚಂದ್ರ ಶರ್ಮ
(B) ಚಂದ್ರಶೇಖರ ಕಂಬಾರ
(C) ಎಂ. ಗೋಪಾಲಕೃಷ್ಣ ಅಡಿಗ
(D) ವಿ. ಕೃ. ಗೋಕಾಕ

13. ವೀರ ರಸದ ಸ್ಥಾಯಿ ಭಾವ :

(A) ಉತ್ಸಾಹ
(B) ಭಯ
(C) ಕ್ರೋಧ
(D) ಹಾಸ

14. ಇವುಗಳಲ್ಲಿ ಕಾವ್ಯ ಪ್ರಯೋಜನವೆಂದು ಪರಿಗಣಿತವಾದುದು :

(A) ಪ್ರತಿಭೆ
(B) ಕಾವ್ಯ ಪರಿಚಯ
(C) ಅಮಂಗಲ ನಿವಾರಣೆ
(D) ವೃದ್ಧ ಸೇವಾನುರಾಗ

15. 'ವಸ್ತು ಪ್ರತಿರೂಪ' ಪರಿಕಲ್ಪನೆಯನ್ನು ರೂಪಿಸಿದವನು :

(A) ಎಫ್. ಆರ್. ಲುಯಿಸ್
(B) ಟಿ.ಎಸ್. ಇಲಿಯಟ್
(C) ಎಜ್ರಾಪೌಂಡ್
(D) ಸ್ಯಾಮ್ಯುಯನ್ ಜಾನ್‌ಸನ್

16. ಮಾರ್ಕ್ಸ್‌ವಾದಿ ಸಿದ್ಧಾಂತದ ಚಿಂತಕ :

(A) ಐ.ಎ. ರಿಚರ್ಡ್ಸ್

(B) ಕ್ರೋಚೆ

(C) ಲಿವೀಸ್

(D) ರೇಮಂಡ್ ವಿಲಿಯಮ್ಸ್

17. ಇದು ಬರಗೂರು ರಾಮಚಂದ್ರಪ್ಪನವರ ವಿಮರ್ಶಾಕೃತಿ :

(A) ಅನುಸಂಧಾನ

(B) ಭುವನದ ಭಾಗ್ಯ

(C) ನಿಜ ದನಿ

(D) ವಿವೇಚನೆ

18. 'ಅವರ್ ಸ್ವರ್ಗಾಗ್ರಮಾನ್ ಏಱಿದಾರ್' ಈ ವಾಕ್ಯ ಕನ್ನಡ ಭಾಷೆಯ ಯಾವ ಹಂತಕ್ಕೆ ಸೇರಿದೆ ?

(A) ಹಳಗನ್ನಡ

(B) ನಡುಗನ್ನಡ

(C) ಪೂರ್ವದ ಹಳಗನ್ನಡ

(D) ನಡುಗನ್ನಡ

19. ಇವುಗಳಲ್ಲಿ ಆತ್ಮಾರ್ಥಕ ಸರ್ವನಾಮ :

(A) ನೀನು, ಅವನು

(B) ಅವಳು, ಅದು

(C) ನೀವು, ನಾನು

(D) ತಾನು, ತಾವು

20. 'ಹೊಸತು-ಹೊಸತು' ಸಂಶೋಧನಾ ಕೃತಿಯ ಕರ್ತೃ :

(A) ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರಿ

(B) ಡಾ|| ಎಂ. ಚಿದಾನಂದ ಮೂರ್ತಿ

(C) ಡಾ|| ಬಿ.ಎ. ವಿವೇಕ ರೈ

(D) ಡಾ|| ಬಿ.ವಿ. ಹೆಂಡಿ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

21. ಇವುಗಳು ಷಟ್ಪದಿಯ ಕೃತಿಗಳು.

I. ಸಿದ್ಧರಾಮ ಚಾರಿತ್ರ್ಯ

II. ಧರ್ಮಾಮೃತ

III. ತೊರವೆ ರಾಮಾಯಣ

IV. ಸೊಬಗಿನ ಸೋನೆ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III

(B) III ಮತ್ತು II

(C) IV ಮತ್ತು I

(D) II ಮತ್ತು IV

22. ಇವರು ಚಂಪೂ ಕಾವ್ಯಗಳನ್ನು ರಚಿಸಿದವರು.

I. ನಂಜುಂಡ

II. ರಾಘವಾಂಕ

III. ಹರಿಹರ

IV. ಆಂಡಯ್ಯ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV

(B) I ಮತ್ತು III

(C) II ಮತ್ತು III

(D) III ಮತ್ತು IV

**23.** ಇವು ಸಂಸ್ಕೃತ ಸಾಹಿತ್ಯದಿಂದ ಪ್ರೇರಣೆ ಪಡೆದ ಕೃತಿಗಳು :

I. ಜಗನ್ನಾಥ ವಿಜಯ
II. ಮಿತ್ರವಿಂದಾ ಗೋವಿಂದ
III. ರನ್ನ ಕಂದ
IV. ಕುಮಾರರಾಮನ ಸಾಂಗತ್ಯ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV
(B) II ಮತ್ತು III
(C) I ಮತ್ತು II
(D) III ಮತ್ತು I

**24.** ಚಿತ್ರದುರ್ಗ ಅಥವಾ ಬಿದನೂರಿನ ಚರಿತ್ರೆಯ ಹಿನ್ನೆಲೆಯಲ್ಲಿ ಬರೆದಿರುವ ಕಾದಂಬರಿಗಳು :

I. ರಕ್ತ ರಾತ್ರಿ
II. ಚಿಕವೀರರಾಜೇಂದ್ರ
III. ಚನ್ನ ಬಸವನಾಯಕ
IV. ಕನ್ನಡಿಗರ ಕರ್ಮಕಥೆ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II
(B) I ಮತ್ತು III
(C) I ಮತ್ತು IV
(D) II ಮತ್ತು III

**25.** ಇವು ಅನುವಾದಿತ ಕಾದಂಬರಿಗಳು :

I. ಹಗ್ಗ ; ತೋಟಿಯ ಮಗ
II. ಇಂದಿರಾಬಾಯಿ ; ಅನ್ನ
III. ಅನಾಥಪಕ್ಷಿ ; ಗೋದಾನ
IV. ತ್ರಿಶಂಕು ; ಕ್ಷಿತಿಜ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III
(B) II ಮತ್ತು III
(C) III ಮತ್ತು IV
(D) IV ಮತ್ತು II

**26.** ಇವು ಭಾರತೀಯ ಕಾವ್ಯಮೀಮಾಂಸೆಯ ಪರಿಕಲ್ಪನೆಗಳು :

I. ಹೃದಯ ಸಂವಾದ ; ಸಾಧಾರಣೀಕರಣ
II. ಅನುಕರಣೆ ; ಗುಣೀಭೂತ ವ್ಯಂಗ್ಯ
III. ವ್ಯಂಜನಾವ್ಯಾಪಾರ ; ಲಕ್ಷಣಾವೃತ್ತಿ
IV. ಔಚಿತ್ಯ ; ಪ್ರತಿಮೆ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III
(B) II ಮತ್ತು III
(C) II ಮತ್ತು IV
(D) III ಮತ್ತು IV

**27.** ಇವರು ಧ್ವನಿ ಸಿದ್ಧಾಂತದ ಪ್ರತಿಪಾದಕರು :

I. ಆನಂದ ವರ್ಧನ

II. ಕ್ಷೇಮೇಂದ್ರ

III. ವಾಮನ

IV. ಅಭಿನವಗುಪ್ತ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) II ಮತ್ತು III

(C) III ಮತ್ತು IV

(D) I ಮತ್ತು IV

**28.** ಇವುಗಳು ಅನ್ಯ ದೇಶ್ಯ ಪದಗಳು :

I. ಒಲವು ; ನೆರವು

II. ಜಮೀನು ; ಖರೀದಿ

III. ಪೆನ್ನು ; ಇಂಕು

IV. ಒಡೆಯ ಮತ್ತು ಗುಲಾಮ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV

(B) II ಮತ್ತು IV

(C) II ಮತ್ತು III

(D) I ಮತ್ತು III

**29.** ಇವು ಕನ್ನಡದ ಮುಕ್ತ ಆಕೃತಿಮಾಗಳು :

I. ಮರ ; ಕಮಲ

II. ಹಾಲು ; ನೀರು

III. ಹೊಳೆ ; ತಿನ್ನು

IV. ದಾನ ; ಮಾಡು

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV

(B) II ಮತ್ತು III

(C) II ಮತ್ತು IV

(D) I ಮತ್ತು III

**30.** ಇವು ಕನ್ನಡದ ವಿಮರ್ಶಾ ಕೃತಿಗಳು :

I. ಕಾವ್ಯವಿಹಾರ ; ಸಮಾಲೋಕನ

II. ನೆನಪಿನ ದೋಣಿಯಲ್ಲಿ ; ಆದಿಕವಿ ವಾಲ್ಮೀಕಿ

III. ಪಂಪಾಯಾತ್ರೆ ; ಸಾಹಿತಿಗಳ ಸಂಗದಲ್ಲಿ

IV. ವಿಭೂತಿಪೂಜೆ ; ಕಾವ್ಯಸಮೀಕ್ಷೆ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV

(B) I ಮತ್ತು III

(C) I ಮತ್ತು II

(D) II ಮತ್ತು III

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

**ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆದರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.** (31 ನೆಯ ಪ್ರಶ್ನೆಯಿಂದ 35 ನೆಯ ಪ್ರಶ್ನೆಯವರೆಗೆ)

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವಿದೇಹಮೆಂಬುದು ನಾಡಲ್ಲಿ ಮಿಥಿಳೆಯೆಂಬುದು ಪೊೞಲದನಾಳ್ವೊಂ ಪದ್ಮರಥನೆಂಬೊನರಸನ ಸಂತತಿಯಿಂ ಬಂದ ವಾಮರಥನೆಂಬೊನರಸನಾತನ ಮಹಾದೇವಿ ಬಂಧುಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತಾಪೊೞಲೊಳ್ ಯಮದಂಡನೆಂಬೊಂ ತಳಾಱಂ ಮತ್ತಲ್ಲಿ ಇರ್ಪೊಂ ವಿದ್ಯುಚ್ಚೋರನೆಂಬೊಂ ಕಳ್ಳನಾತಂ ಜೃಂಭಿನಿ ಸ್ತಂಭಿನಿ ಮೋಹಿನಿ ಸರ್ಷಪಿ ತಾಳೋದ್ಘಾಟಿನಿ ವಿದ್ಯಾಮಂತ್ರ ಚೂರ್ಣಯೋಗ ಘುಟಿಕಾಂಜನಮೆಂದಿವು ಮೊದಲಾಗೊಡೆಯ ತಸ್ಕರಶಾಸ್ತ್ರಂಗಳೊಳಾದಮಾನುಂ ಕುಶಲನಂತಪ್ಪ ಕಳ್ಳಂ ಪೊೞಲ ಕಸವರಂಗಳನಿರುಳ್ ಕಳ್ದು ಪೊೞಲ್ಗೆ ನಾಡೆಯಂತರದೊಳೊಂದು ಪರ್ವತಮುಂಟಲ್ಲಿ ಪಿರಿದೊಂದು ಗುಹೆಯುಂಟದಱೊಳಗೆ ಕಳ್ದ ಕಸವರಂಗಳೆಲ್ಲಮಂ ಪೊಲ್ದಿಟ್ಟು ಗುಹೆಯ ಬಾಗಿಲಂ ಪಿರಿದೊಂದು ಸಿಲೆಯಂ ತಂದಿಟ್ಟು ಮುಚ್ಚಿ ಬಂದು ಪಗಲೆಲ್ಲಂ ಪಾೞ್ದೇಗುಲದೊಳಂಜನಮನೆಚ್ಚಿ ತಾಂ ತೊನ್ನನಾಗಿ ಮುರುಂಟಿದ ಕೈಯುಂ ಕಾಲುಂ ಬೆರಸು ಮೂಗೊಳಗರ್ದು ರಸಿಗೆ ಸುರಿಯೆ ನೊಱವುಗಳ್ ಮುಸುಱಿಕೊಂಡು ತಿನೆ ಪೇಸಿದನಾಗಿ ಲೋಗರ ಮನೆಗಳೊಳ್ ಭೈಕ್ಷಮಂ ಬೇಡಿ ಮನೆಮನೆಯಂ ತೊೞಲ್ದು ತನ್ನ ತೊನ್ನು ಗೊಂಡಿರ್ಪುದಱನಪುತ್ತುಮಿಂತು ಪಗಲೆಲ್ಲಮಿರ್ದಿರುಳಪ್ಪಾಗಳ್ ದಿವ್ಯಮಪ್ಪ ತನ್ನ ಸ್ವಾಭಾವಿಕಮಪ್ಪ ಮುನ್ನಿನ ರೂಪಂ ಕೈಕೊಂಡು ಪುಟ್ಟಿಗೆಯನುಟ್ಟು ಮೆಯ್ಯಂ ಪೂಸಿ ಪೂವಂ ಮುಡಿದು ಕರ್ಪೂರ ಸಂಮಿಶ್ರಿತಮಪ್ಪ ತಂಬುಲಂದಿನುತ್ತುಂ ಸೂಳೆಗೇರಿಗಳಂ ತೊೞಲ್ದು ತನ್ನಂ ಮೆಱೆಯುತ್ತಂ ಮನಕ್ಕೆ ವಂದಗ್ಗಳದೊಳ್ಪೆಂಡಿರೊಳೊತ್ತೆಯನಿಟ್ಟು ಭೋಗೋಪಭೋಗಂಗಳ್ಗೆ ಕಸವರಮಂ ಕೊಟ್ಟನುಭವಿಸುತ್ತ ಮಾರುಮಱ ಯಂತಿರ್ದು ಬಚ್ಚರ ದೂಸಿಗರ ನಿಯೋಗಿಗಳ ಅಗ್ಗಳಮಪ್ಪ ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಳ್ದು ಮತ್ತೊಂದು ದಿವಸಂ ಪದ್ಮರಥಂಗೊಸೆದಚ್ಯುತೇಂದ್ರನಟ್ಟಿದ ದಿವ್ಯಮಪ್ಪ ಸರ್ವರುಜಾಪಹಾರಮೆಂಬ ಹಾರಂ ಸಂತತಿಯಿಂ ವಾಮರಥಂಗೆ ಬಂದುದಂ ವಾಮರಥಂ ಕರುಮಾಡದೇೞನೆಯ ನೆಲೆಯೊಳ್ ತನ್ನ ಲುಂದವೋವರಿಗೆಯ ಪುಡಿಕೆಯೊಳಿಟ್ಟೆಲ್ಲಾ ಕಾಲಮುಂ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚಿಸುತ್ತಂ ಪೊಡೆಮಡುತ್ತ ಮಿರ್ಕ್ಕುಮಿಂತಪ್ಪ ಹಾರಮಂ ವಿದ್ಯುಚ್ಚೋರನಂಜನಮಂ ಕಣ್ಣೊಳೆಚ್ಚಿಯಾರುಂ ತನ್ನಂ ಕಾಣದಂತಾಗಿರೆ ಅರಮನೆಯಂ ಪೊಕ್ಕರಸನ ಮಱಲುಂದುವೋವರಿಯಂ ಪೊಕ್ಕು ತಲೆದೆಸೆಯೊಳರ್ಚಿಸಿರ್ದ ಪುಡಿಕೆಯಂ ತೆಱೆದು ಹಾರಮಂ ಕೊಂಡರಮನೆಯಿಂ ಪೊಱಮಟ್ಟು ಪೋಗಿ ಪೊಱವೊದಲ ಗುಹೆಯೊಳ್ ಪೂೞ್ದಿಟ್ಟು ಪೊೞಲ್ಗೆವಂದು ಮುನ್ನಿನಂತೆ ತೊನ್ನ ರೂಪಂ ಕೈಕೊಂಡಿರ್ದಂ.

ಮತ್ತಿತ್ತರಸಂ ನೇಸರ್ಮೂಡೆ ಹಾರಮಂ ಕಾಣದೆ ಆಸ್ಥಾನಮಂಟಪದೊಳ್ ಸಿಂಹಾಸನಮಸ್ತಕಸ್ಥಿತನಾಗಿರ್ದು ತಳಾಱನಪ್ಪ ಯಮದಂಡಂಗೆ ಬೞಿಯಟ್ಟಿವರಿಸಿ ಇಂತೆಂದನೆಲವೊ ಯಮದಂಡಾ ಪೊೞಲ ಪಾರ್ವರ ಪರದರ ಸೂಳೆಯರ ಒಕ್ಕಲ ಮಕ್ಕಳ ಕಸವರಮೆಲ್ಲಮಂ ಕಳ್ದೊಡಮಾರಯ್ಯದೆ ಕೆಮ್ಮಗಿರ್ಪೆಯಲ್ಲದೆಯುಮೆಮ್ಮ ಸೆಜ್ಜೆಯೋವರಿಯಂ ಕಳ್ಳಂ ಪೊಕ್ಕು ಪುಡಿಕೆಯಂ ತೆಱೆದ ಚ್ಯುತೇಂದ್ರನಿತ್ತ ಕುಲಧನಮಪ್ಪ ಹಾರಮಂ ಕೊಂಡುಪೋದಂ ಬೇಗಂ ಕಳ್ಳನನಾರಯ್ದು ಹಾರಮಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನೆಂದೊಡೆ ತಳಾಱನೆಂದಂ ದೇವಾ ಏೞುದಿವಸಮೆನಗೆಡೆಯನೀವುದೇೞುದಿವಸದಿಂದೊಳಗೆ ಕಳ್ಳನ ನಾರಯ್ಯಲಾಱದಾಗಳ್ ದೇವರೆನ್ನಂ ಮೆಚ್ಚುಕೆಯ್ವುದೆಂದೊಡರಸನಂತಗೆಯ್ಯಂ ದೊಡರಮನೆಯಿಂದಂ ಪೊಱಮಟ್ಟು ಪೊೞಲೊಳಗೆ ಸೂಳೆಗೇರಿಗಳೊಳಮಂಗಡಿಗಳೊಳಂ ಬಸದಿಗಳೊಳಂ ವಿಹಾರಂಗಳೊಳಂ ದೇವಾಲಯಂಗಳೊಳಂ ಪೊಱವೊೞಲೊಳಂ ಕೆಲದ ಪೊೞಲ್ಗಳೊಳಮಾಱುಂ ದಿವಸಂ ನಿರಂತರಮಾರಯ್ದೆಲ್ಲಿಯುಂ ಕಾಣದೇೞನೆಯ ದೆವಸದಂದು ಪಾೞ್ದೇಗುಲದೊಳಿರ್ದು ತೊನ್ನಂ ಪೋಪಾಗಳ್ ಪಿರಿದೊಂದು ಕಿಱುವಳ್ಳಮಂ ಕಂಡದಂ ವಿದ್ಯಾಧರ ಕರಣದಿಂ ಲಂಘಿಸಿ ಪೋಪುದಂ ಯಮದಂಡಂ ಗೆಂಟಱೊಳಿರ್ದು ಕಂಡಿವನೆ ಕಳ್ಳನೆಂದು ನಿಶ್ಚಯಿಸಿ ಪಿಡಿದರಮನೆಗೆ ಎಳೆದು ತಂದಂ.

**31.** ಈ ಭಾಗದ ಪ್ರಧಾನ ಆಶಯ :

(A) ಕಳ್ಳನ ಚಾಣಾಕ್ಷತೆ
(B) ರಾಜನ ದೂರದೃಷ್ಟಿ
(C) ತಳವಾರನ ನಿಷ್ಕ್ರಿಯತೆ
(D) ಅರಸಿಯ ಆಭರಣ ಮೋಹ

**32.** ಮಿಥಿಲಾ ಪಟ್ಟಣದ ರಾಜ :

(A) ಪದ್ಮರಥ
(B) ವಾಮರಥ
(C) ಅಚ್ಯುತೇಂದ್ರ
(D) ಯಮದಂಡ

**33.** ಕಳ್ಳನು ತೊನ್ನನ ರೂಪವನ್ನು ಧರಿಸುತ್ತಿದ್ದುದು :

(A) ಅರಮನೆಯಲ್ಲಿ
(B) ಸೂಳೆಗೇರಿಯಲ್ಲಿ
(C) ಪಾಳ್ದೇಗುಲದಲ್ಲಿ
(D) ಗುಹೆಯಲ್ಲಿ

**34.** 'ಕಳ್ಳನಿಗೆ ಕೊಡಬೇಕಾದ ಶಿಕ್ಷೆಯನ್ನು ನಿನಗೆ ಕೊಡುತ್ತೇನೆ' ಎಂದು ಹೇಳಿದವನು :

(A) ಮಂತ್ರಿ
(B) ಯಮದಂಡ
(C) ಬಂಧುಮತಿ
(D) ವಾಮರಥ

**35.** ತಳವಾರನು ವಿದ್ಯುಚ್ಚೋರನೇ ಕಳ್ಳನೆಂದು ನಿರ್ಧರಿಸಿದ ಸನ್ನಿವೇಶ :

(A) ಕಳ್ಳನನ್ನು ಕಂಡು ಜನರು ಬೊಬ್ಬೆ ಇಡುತ್ತಿರುವಾಗ
(B) ಹಾರವನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿರುವಾಗ
(C) ವಿದ್ಯಾಧರಕರಣದಿಂದ ದೊಡ್ಡ ಹಳ್ಳವನ್ನು ಹಾರುತ್ತಿರುವಾಗ
(D) ಕಳ್ಳನು ಚಿನ್ನವನ್ನು ಮಾರುತ್ತಿರುವಾಗ

**ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

**36.** ಹೇಳಿಕೆ : ಬಚ್ಚಲುದಕಂ ತಿಳಿದಡಾರ ಮೀಹಕ್ಕೆ ಯೋಗ್ಯಂ.
ವಿವರಣೆ : ಬಚ್ಚಲಿನಲ್ಲಿ ತೆರೆದ ಕಿಟಕಿ ಇದ್ದರೆ ಸ್ನಾನಕ್ಕೆ ಯೋಗ್ಯವೆ ?

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**37.** ಹೇಳಿಕೆ : ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ !
ವಿವರಣೆ : ಇರುವ ಭೋಗವನ್ನು ಬಿಟ್ಟು, ಇಲ್ಲದುದರ ಕಡೆಗೆ ತುಡಿಯುವುದೇ ಜೀವನವೆ ?

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ತಪ್ಪು, ವಿವರಣೆ ತಪ್ಪು
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

38. ಹೇಳಿಕೆ : ಧ್ವನಿಯೆಂಬುದಳಂಕಾರಂ ಧ್ವನಿಯಿಸುಗುಂ ಶಬ್ದದಿಂದ ಮರ್ಥದೆ ದೂಷ್ಯಂ.

ವಿವರಣೆ : ಧ್ವನಿ ಎನ್ನುವುದು ಅಲಂಕಾರವಲ್ಲ, ಶಬ್ದಾರ್ಥದಿಂದ ಧ್ವನಿ ಉತ್ಪತ್ತಿಯಾಗುತ್ತದೆ.

(A) ಹೇಳಿಕೆ ತಪ್ಪು, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ತಪ್ಪು, ವಿವರಣೆ ತಪ್ಪು
(D) ಹೇಳಿಕೆ ಸರಿ, ವಿವರಣೆ ತಪ್ಪು

39. ಹೇಳಿಕೆ : ಅರ್ಥರಹಿತವಾದ, ಅತ್ಯಂತ ಚಿಕ್ಕದಾದ ಧ್ವನಿಘಟಕವೇ ಧ್ವನಿಮಾ.

ವಿವರಣೆ : ಅರ್ಥವಿಲ್ಲದ, ಚಿಕ್ಕದಾದ ಘಟಕವನ್ನು 'ಧ್ವನಿ' ಎನ್ನುತ್ತಾರೆ.

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

40. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ರನ್ನ – ಪರಶುರಾಮ ಚರಿತೆ
(B) ನಿಜಗುಣ ಶಿವಯೋಗಿ – ವಿವೇಕ ಚಿಂತಾಮಣಿ
(C) ಚಾವುಂಡರಾಯ – ಬಾಹುಬಲಿ ಚರಿತೆ
(D) ದುರ್ಗಸಿಂಹ – ಪಂಚ ತಂತ್ರ

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ಎ.ಆರ್. ಕೃಷ್ಣಶಾಸ್ತ್ರಿ – ವಚನ ಭಾರತ
(B) ಎಂ.ಎನ್. ಕಾಮತ್ – ನನ್ನ ಚಿಕ್ಕ ತಂದೆ
(C) ಉತ್ತಂಗಿ ಚೆನ್ನಪ್ಪ – ಅಲ್ಲಮನ ವಚನಗಳು
(D) ಆರ್. ನರಸಿಂಹಾಚಾರ್ – ಕನ್ನಡ ಛಂದಸ್ಸು

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ ?

(A) ಭರತ – ನಾಟ್ಯಶಾಸ್ತ್ರ
(B) ರಾಜಶೇಖರ – ಕಾವ್ಯ ಮೀಮಾಂಸಾ
(C) ವಿಶ್ವನಾಥ – ಸಾಹಿತ್ಯ ದರ್ಪಣ
(D) ಕ್ಷೇಮೇಂದ್ರ – ವಕ್ರೋಕ್ತಿ ಜೀವಿತ

43. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ಶಂ.ಬಾ. ಜೋಷಿ – ಭಾರತೀಯ ಸಂಸ್ಕೃತಿ
(B) ಎಲ್. ಬಸವರಾಜು – ವಚನ ಧರ್ಮಸಾರ
(C) ಎನ್. ಬಸವಾರಾಧ್ಯ – ನಾಡೋಜ ಪಂಪ
(D) ಎಚ್. ತಿಪ್ಪೇರುದ್ರಸ್ವಾಮಿ – ಕರ್ನಾಟಕ ಸಂಸ್ಕೃತಿ ಸಮೀಕ್ಷೆ

**44.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ರಾಮಚಂದ್ರ ಶರ್ಮ – ಹೇಸರಗತ್ತೆ

(B) ಪಿ. ಲಂಕೇಶ – ಸಿಹಿ ಮಾವಿನಗಿಡ

(C) ಶಾಂತಿನಾಥ ದೇಸಾಯಿ – ಮೂರು ದಾರಿಗಳು

(D) ಗಿರೀಶ ಕಾರ್ನಾಡ್ – ಒಡೆದ ಬೊಂಬೆ

**ಬಹು ಆಯ್ಕೆಯ ಜೋಡಣೆ :**

**45.**

| | | | |
|---|---|---|---|
| a. | ಕೃಷ್ಣಮೂರ್ತಿ ಪುರಾಣಿಕ | i. | ಮಾಡಿದ್ದುಣ್ಣೊ ಮಹರಾಯ |
| b. | ಗಳಗನಾಥ | ii. | ಮಹಾದರ್ಶನ |
| c. | ಎಂ.ಎಸ್. ಪುಟ್ಟಣ್ಣ | iii. | ಸನಾದಿ ಅಪ್ಪಣ್ಣ |
| d. | ದೇವುಡು | iv. | ಕುಮುದಿನಿ |
| | | v. | ಒಂಟಿ ಧ್ವನಿ |

ಇವುಗಳಲ್ಲಿ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | iii | i | iv | ii |
| (B) | iii | iv | i | ii |
| (C) | i | iii | ii | iv |
| (D) | iii | iv | ii | i |

**46.**

| | | | |
|---|---|---|---|
| a. | ನಿಷೇಧಾರ್ಥಕ | i. | ನುಡಿಯಲಿ |
| b. | ವಿಧ್ಯರ್ಥಕ | ii. | ನುಡಿಯಬಹುದು |
| c. | ಪ್ರೇರಣಾರ್ಥಕ | iii. | ನುಡಿಯನು |
| d. | ಸಂಭಾವನಾರ್ಥಕ | iv. | ನುಡಿಯಲ್ಪಡುವುದು |
| | | v. | ಹಾಡಿಸುತ್ತಾಳೆ |

ಇವುಗಳಲ್ಲಿ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | i | ii | v | iv |
| (B) | ii | v | iii | iv |
| (C) | iii | i | v | ii |
| (D) | iv | ii | iii | v |

47. a. ಹಾಲ ನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ — i. ಪಂಪ

b. ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ — ii. ಪುರಂದರದಾಸ

c. ಅನುಭವದಡುಗೆಯ ಮಾಡಿ ಅದಕನುಭವಿಗಳು ಬಂದು ನೀವೆಲ್ಲ ಕೂಡಿ — iii. ಅಲ್ಲಮ

d. ಭೋಗವಿಚಾರವು ಬೇಕು ನೃಪತಿಗಾತ್ಮ ವಿಚಾರವು ಬೇಕು — iv. ಬಸವಣ್ಣ

v. ರತ್ನಾಕರವರ್ಣಿ

ಇವುಗಳಲ್ಲಿ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | iii | i | ii | v |
| (B) | iv | ii | iii | i |
| (C) | v | iii | i | ii |
| (D) | i | v | ii | iii |

ಅನುಕ್ರಮ ಮಾದರಿ :

48. ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ.

(A) ದುರ್ಗಸಿಂಹ, ನೇಮಿಚಂದ್ರ, ಕುಮಾರ ವಾಲ್ಮೀಕಿ, ಸಂಚಿಯ ಹೊನ್ನಮ್ಮ

(B) ನೇಮಿಚಂದ್ರ, ಕುಮಾರ ವಾಲ್ಮೀಕಿ, ದುರ್ಗಸಿಂಹ, ಸಂಚಿಯ ಹೊನ್ನಮ್ಮ

(C) ಸಂಚಿಯ ಹೊನ್ನಮ್ಮ, ಕುಮಾರ ವಾಲ್ಮೀಕಿ, ದುರ್ಗಸಿಂಹ, ನೇಮಿಚಂದ್ರ

(D) ಕುಮಾರ ವಾಲ್ಮೀಕಿ, ದುರ್ಗಸಿಂಹ, ಸಂಚಿಯ ಹೊನ್ನಮ್ಮ, ನೇಮಿಚಂದ್ರ

49. (A) ಮಮ್ಮಟ, ದಂಡಿ, ರುದ್ರಟ, ಜಗನ್ನಾಥ ಪಂಡಿತ

(B) ಜಗನ್ನಾಥ ಪಂಡಿತ, ಮಮ್ಮಟ, ದಂಡಿ, ರುದ್ರಟ

(C) ರುದ್ರಟ, ಜಗನ್ನಾಥ ಪಂಡಿತ, ದಂಡಿ, ಮಮ್ಮಟ

(D) ದಂಡಿ, ರುದ್ರಟ, ಮಮ್ಮಟ, ಜಗನ್ನಾಥ ಪಂಡಿತ

50. (A) ಗತಿಬಿಂಬ, ಕರ್ನಾಟ ಕವಿಚರಿತೆ, ಹೊಸತು ಹೊಸತು, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ

(B) ಕರ್ನಾಟ ಕವಿಚರಿತೆ, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಗತಿಬಿಂಬ, ಹೊಸತು ಹೊಸತು

(C) ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಗತಿಬಿಂಬ, ಕರ್ನಾಟ ಕವಿಚರಿತೆ, ಹೊಸತು ಹೊಸತು

(D) ಹೊಸತು ಹೊಸತು, ಗತಿಬಿಂಬ, ಕರ್ನಾಟ ಕವಿಚರಿತೆ, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ

**Space For Rough Work**